ಇಂದು ದಿ:09.01.2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಆರೋಪಿ ಪರ: ಶ್ರೀ ಸಿ ಕೆ ಎಂ ವಕೀಲರಿಂದ :

ಮಿಲಿಂಡ ವಿದ್ಯಾ ಸಂಸ್ಥೆಯ ಟ್ರಸ್ಟ್‌ನಿಂದ ಆರೋಪಿಯನ್ನು ಟ್ರಸ್ಟಿ ಸ್ಥಾನದಿಂದ ತೆಗೆಯಲಾಗಿದೆ ಎಂದರೆ ಸರಿ. ಅದನ್ನು ಪ್ರಶ್ನಿಸಿ ಆರೋಪಿಯು ಅಸಲು ದಾವಾ ಸಂ: 218/2012 ರಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಅದರಂತೆ ನಾನು ಸದರಿ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಆಗಿ ಸ್ಥಾನ ದುರ್ಬಳಕ್ಕೆ ಮಾಡಿಕೊಂಡು ಹಣ ಮತ್ತು ಅಧಿಕಾರ ದುರುಪಯೋಗ ಮಾಡಿಕೊಂಡಿರುತ್ತೇನೆಂದು ನನ್ನನ್ನು ಆ ಸ್ಥಾನದಿಂದ ತೆರವುಗೊಳಿಸಬೇಕೆಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾದಲ್ಲಿ ಅಸಲು ದಾವಾ ಸಂ: 2/2016 ರಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಎರಡೂ ದಾವೆಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾದಲ್ಲಿ ಈಗ ಚಾಲ್ತಿಯಲ್ಲಿವೆ ಎಂದರೆ ಸರಿ. ಅಸಲು ದಾವಾ ಸಂ: 2/2016 ಆಗುವ ಪೂರ್ವದಲ್ಲಿ ಸದರಿ ಪ್ರಕರಣ ಮಿಸ್ ಸಂ: 108/2011 ಎಂದು ದಾಖಲಾಗಿತ್ತು ಎಂದರೆ ಸರಿ. (ಈ ಹಂತದಲ್ಲಿ ಫಿರ್ಯಾದಿ ಪರ ವಕೀಲರು ಅಸಲು ದಾವಾ ಸಂ: 218/2012 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಕ್ಕೆ ವರ್ಗಾವಣೆ ಆದ ಬಳಿಕ ಅಸಲು ದಾವಾ ಸಂ: 3/2017 ಎಂದು ಮರು ಸಂಖ್ಯೆ ನೀಡಲಾಗಿರುತ್ತದೆ ಎಂದು ಹೇಳುತ್ತಾರೆ).

ನಿಪಿ-7 ರ ಪ್ರಕಾರ ಶ್ರೀಮತಿ ಆಶಾ ಎಂಬುವವರಿಗೆ ವಂತಿಗೆ ಹಣ, ಶುಲ್ಕ ಸಂಗ್ರಹಿಸುವಿಕೆ, ವಾಹನ ನಿರ್ವಹಣೆ ಮತ್ತು ಫೀ ಬಾಬ್ತು ಹಣ ನಿರ್ವಹಣೆಯ ಜವಾಬ್ದಾರಿ ವಹಿಸಲಾಗಿತ್ತು ಎಂದರೆ ಸರಿ. ಅದರಂತೆ ಆಕೆಯೇ ಹಣವನ್ನು ಬ್ಯಾಂಕಿಗೆ ಜಮಾ ಮಾಡಬೇಕು ಎಂದು ಠರಾವು ಮಾಡಿರುತ್ತೇವೆ ಎಂದರೆ ಸರಿ. ನಿಪಿ-7ರ ಆ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಅದರಂತೆ ಶಿಕ್ಷಕಿಯರಾದ ಜಲಜಾಕ್ಷಿ, ಹೇಮಾವತಿ, ಮತ್ತಿತರಿಗೆ ಠರಾವಿನಡಿಯಲ್ಲಿ ಜವಾಬ್ದಾರಿಯನ್ನು ವಹಿಸಲಾಗಿತ್ತು ಎಂದರೆ ಸರಿ. ಠರಾವಿನ ಪುಸ್ತಕದಲ್ಲಿ ಗೋವಿಂದಯ್ಯ ಎಂಬ ಹೆಸರಿನ ಮೇಲೆ ಇರುವ ಸಹಿ ನನ್ನ ಇರುತ್ತದೆ. ನಿಪಿ-7ರಡಿಯಲ್ಲಿ ಎಲ್ಲಿಯೂ ವಂತಿಗೆ ಹಣ, ಶುಲ್ಕ ಸಂಗ್ರಹಿಸುವಿಕೆ, ವಾಹನ

ನಿರ್ವಹಣೆ ಮತ್ತು ಫೀ ಬಾಬ್ತು ಹಣ ನಿರ್ವಹಣೆಯ ಜವಾಬ್ದಾರಿಯನ್ನು ಆರೋಪಿಗೆ ವಹಿಸಿರುವ ಬಗ್ಗೆ ಠರಾವು ಇರುವುದಿಲ್ಲ. ನಿಪಿ-6 ರಲ್ಲಿ ಕಾಣಿಸಿರುವಂತೆ ಸಂಸ್ಥೆಯ ಹಣಕಾಸಿನ ವ್ಯವಹಾರವನ್ನು ಮೈಸೂರಿನ ಬ್ಯಾಂಕ್ ಮಹಾರಾಷ್ಟ್ರ ಮತ್ತು ಬೈಲುಕುಪ್ಪೆಯ ಸಿಂಡಿಕೇಟ್ ಬ್ಯಾಂಕಿನಲ್ಲಿರುವ ಸಂಸ್ಥೆಯ ಆಡಳಿತ ಮಂಡಳಿಯ ಖಾತೆಯ ನಿರ್ವಹಣೆಯನ್ನು ನಾನು ಮತ್ತು ಧರ್ಮದರ್ಶಿಗಳಾದ ಪ್ರೊ.ಸುಮಿತ್ರಾಬಾಯಿಯವರು ಜಂಟಿಯಾಗಿ ನಿರ್ವಹಿಸಬೇಕೆಂದು ಠರಾವು ಮಾಡಿರುತ್ತೇವೆ ಎಂದರೆ ಸರಿ. ಸದರಿ ಠರಾವಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಠರಾವನ್ನು ನಿಡಿ-2 ಎಂದು ಗುರುತಿಸಲಾಯಿತು.

ನಾನು ಮತ್ತು ಸುಮಿತ್ರಾಬಾಯಿ ಖಾತೆ ತೆರೆದು ಜಂಟಿಯಾಗಿ ಹಣ ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಮಾಡಿರುವುದಿಲ್ಲ. ಆ ಕಾರಣ ಸದರಿ ಠರಾವು ಪಾಲನೆಯಾಗಿರುವುದಿಲ್ಲ ಎಂದರೆ ಸುಮಿತ್ರಾಬಾಯಿಯವರು ಅದಕ್ಕೆ ಸಹಕರಿಸದೇ ಇದ್ದಕ್ಕೆ ಠರಾವು ಪಾಲೆಯಾಗಿರುವುದಿಲ್ಲ ಎಂದು ಹೇಳುತ್ತೇನೆ. ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠರಾವು ಪುಸ್ತಕಗಳಲ್ಲಿ ಆರೋಪಿಯೊಂದಿಗೆ ಸಂಸ್ಥೆಯ ಹಣಕಾಸು ವ್ಯವಹಾರ ಮಾಡುವ ವಿಚಾರವಾಗಿ ಯಾವುದೇ ಠರಾವು ಆಗಿರುವುದಿಲ್ಲ. ಆರೋಪಿ ಶಾಲಾ ಶುಲ್ಕ ಸಂಗ್ರಹಣೆಯಲ್ಲಿ ಸಂಸ್ಥಗೆ 6,81,962/- ರೂ.ಗಳನ್ನು ದುರ್ಬಳಕೆ ಮಾಡಿರುತ್ತಾರೆಂದು ತೋರಿಸಲು ದಾಖಲೆಗಳು ಇಲ್ಲ ಎಂದರೆ ಇರುವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತೇನೆ. ವಂತಿಗೆ ಹಣ, ಶುಲ್ಕ ಸಂಗ್ರಹಿಸುವಿಕೆ, ವಾಹನ ನಿರ್ವಹಣೆ ಮತ್ತು ಫೀ ಬಾಬ್ತು ಹಣ ನಿರ್ವಹಣೆಯನ್ನು ಶ್ರೀಮತಿ.ಆಶಾ ರವರಿಂದ ಆರೋಪಿಗೆ ಜವಾಬ್ದಾರಿ ವರ್ಗಾಯಿಸಿರುವ ಬಗ್ಗೆ ಠರಾವು ಇದೆಯೇ ಎಂದರೆ ಸಾಕ್ಷಿಯು ಆಶಾರವರಿಗೆ ಜವಾಬ್ದಾರಿ ವಹಿಸಿರುವ ಠರಾವು 2009 ರಲ್ಲೇ ಆಗಿದ್ದು, ಅದಕ್ಕೆ ಪೂರ್ವದಲ್ಲಿ ಆರೋಪಿಯೇ ಆ ಜವಾಬ್ದಾರಿಯನ್ನು ವಹಿಸಿದ್ದರು ಎಂದು ಹೇಳುತ್ತಾರೆ. ಅದಕ್ಕೆ ಪೂರ್ವದಲ್ಲಿ ಆ ಜವಾಬ್ದಾರಿಯನ್ನು ಆರೋಪಿಗೆ ವಹಿಸಿದ್ದನ್ನು ತೋರಿಸಲು ನಿಖರವಾದ ಯಾವುದೇ ದಾಖಲಾತಿ ಇರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿ, ಅದು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಕೊಡಗು ಇವರು ನೀಡಿರುವ ಪತ್ರ ಎಂದರೆ ಹೌದು ಎಂದು ಹೇಳುತ್ತಾರೆ ಸದರಿ ದಾಖಲಾತಿಯನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3 ರಲ್ಲಿ 1,31,250/- ರೂ. ಪೈಕಿ ಯಾವುದೇ ಹಣವನ್ನು ನಗದು ರೂಪದಲ್ಲಾಗಲೀ ಅಥವಾ ಅದಕ್ಕೆ ಪ್ರತಿಯಾಗಿ ಬೇರೆ ರೂಪದಲ್ಲಾಗಲೀ ಆರೋಪಿಗಾಗಲೀ ಅಥವಾ ಆ

9.1

ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮುಖ್ಯ ಶಿಕ್ಷಕರಿಗಾಗಲಿ ನೀಡಲಾಗಿದೆ ಎಂದು ಕಾಣಿಸಿರುವುದಿಲ್ಲ ಎಂದರೆ ಸರಿ. ದೂರಿನಲ್ಲಿ ಸದರಿ ಸಂಸ್ಥೆಯಿಂದ ಬಂದ *1,51,250/-* ರೂ. ಹಣವನ್ನು ಆರೋಪಿ ದುರ್ಬಳಕೆ ಮಾಡಿಕೊಂಡಿದ್ದಾರೆಂದು ಆರೋಪಿಸಿದ್ದೇನೆ ಎಂದರೆ ಸರಿ. ಸದರಿ ಪತ್ರ ಬರುವ ಪೂರ್ವದಲ್ಲಿ ಸದರಿ ಸಂಸ್ಥೆಯಿಂದ ಬಂದ ಹಣವನ್ನು ಆರೋಪಿ ದುರ್ಬಳಕೆ ಮಾಡಿಕೊಂಡಿದ್ದಾನೆಂದು ತೋರಿಸಲು ದಾಖಲೆ ಇದೆಯೇ ಎಂದರೆ ಸಾಕ್ಷಿಯು ಸದರಿ ಹಣ ಮಿಳಿಂದ ಸಂಸ್ಥೆಗೆ ನೀಡಿರುವ ಬಗ್ಗೆ ಸಂಸ್ಥೆಯವರು ಪತ್ರ ಬರೆದಿದ್ದು, ಆ ಸಂದರ್ಭದಲ್ಲಿ ಆರೋಪಿಯೇ ಎಲ್ಲಾ ವ್ಯವಹಾರ ಮಾಡುತ್ತಿದ್ದುದರಿಂದ ಆ ಹಣದ ಬಗ್ಗೆ ಲೆಕ್ಕ ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಪತ್ರವನ್ನು ನ್ಯಾಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ಪತ್ರದ ನಿಖರವಾದ ದಿನಾಂಕ ಹೇಳಲು ನೆನಪಿಲ್ಲ

ವಂತಿಗೆ ಹಣವನ್ನು ಕಾರ್ಡ್ ಸಂಸ್ಥೆಯಿಂದ ಪಡೆದುಕೊಳ್ಳಲು ಆರೋಪಿಗೆ ಅಧಿಕಾರ ನೀಡಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ಕಾರ್ಡ್ ಸಂಸ್ಥೆಯಿಂದ ಆರೋಪಿ ಹಣ ಪಡೆದಿದ್ದಾರೆಂದು ತೋರಿಸಲು ಯಾವುದೇ ಪತ್ರ ಇರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಿ, ಧರ್ಮ ಎಂಬ ವ್ಯಕ್ತಿ ಬರೆದ ಪತ್ರ ಎಂದರೆ ಹೌದು ಎಂದು ಹೇಳುತ್ತಾರೆ ಆ ಪತ್ರವನ್ನು ನಿಡಿ-*4* ಎಂದು ಗುರುತಿಸಲಾಯಿತು. ದೂರಿನಲ್ಲಿ ಧರ್ಮರವರಿಂದ ಪಡೆದ ಹಣ *1,05,000/-* ರೂ.ಗಳನ್ನು ಆರೋಪಿ ದುರ್ಬಳಕೆ ಮಾಡಿರುತ್ತಾರೆಂದು ಆರೋಪಿಸಿರುತ್ತೇನೆ ಎಂದರೆ ಸರಿ. ನಿಡಿ*4* ರಡಿಯಲ್ಲಿ ಸದರಿ ಧರ್ಮರವರು ಸಂಸ್ಥೆಯ ಕಟ್ಟಡ ನಿರ್ಮಾಣದಲ್ಲಿ ಬೇಕಾಗಿರುವಂತಹ ಇಟ್ಟಿಗೆ, ಮರಳು, ಹೆಂಚು, ಕಿಟಕಿ ಬಾಗಿಲುಗಳು ಮತ್ತು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕೂಲಿ ಹಾಗೂ ಶಿಕ್ಷಕರಿಗೆ ವೇತನ ಇವುಗಳನ್ನು ಸಾಲದ ರೂಪದಲ್ಲಿ ನೀಡಿರುವುದಾಗಿ ಕಾಣಿಸಿರುತ್ತಾರೆ ಎಂದರೆ ಸರಿ. ಸಂಸ್ಥೆಗೆ ಬರುವ ಗ್ರಾಂಟಿನಿಂದ ನೀಡುತ್ತೇನೆಂದು ವಾಗ್ದಾನ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-*4* ರಲ್ಲಿ ಧರ್ಮರವರು ಆರೋಪಿಗೆ ಯಾವುದೇ ಹಣ ನೀಡಿಲ್ಲ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ.

(ಈ ಹಂತದಲ್ಲಿ ಹೆಚ್ಚಿನ ಪಾಟೀಸವಾಲನ್ನು ಸಮಯದ ಅಭಾವ ಇರುವುದರಿಂದ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿ.ಸಿ.ನ್ಯಾ ಮತ್ತು ಪ್ರದನ್ಯಾದಂ,
ಪಿರಿಯಾಪಟ್ಟಣ.